ಶ್ರೀ ಎಂ. ಎಸ್. ಕೃಷ್ಣನ್.—ಅಧ್ಯಕ್ಷರೆ. ಈ ಸದನದಲ್ಲಿ ಸರಿಯಾದಂಥ ಪ್ರತಿಗಳನ್ನು ಯಾರಿಗೂ ಕೊಟ್ಟಿಲ್ಲ. ಯಾರಿಗೋ ಒಬ್ಬರಿಗೆ ಪ್ರಿಂಟ್ ಮಾಡಿಸಿ ಕೊಟ್ಟು ಎಲ್ಲರಿಗೂ ಕೊಟ್ಟಿದ್ದೇವೆಂದರೆ ಹೇಗೆ ? How is it correct ? It is not at all correct.

ಅಧ್ಯಕ್ಷರು.—ಸರಿಯಾದ ಪ್ರತಿಗಳನ್ನು ಮೊದಲು ಎಲ್ಲರಿಗೂ ಕೊಡಿ. ನಂತರ ನೋಡೋಣ. Ruling is reserved.

Sri M. S. Krishnan.—Keep it pending. Thank you very much.

೧೯೬೭ನೇ ಇಸವಿಯ ಕರ್ನಾಟಕ ಸ್ಥಳೀಯ ಪ್ರದೇಶಗಳಿಗೆ ಬಳಕೆ, ಉಪಯೋಗ ಅಥವಾ ಮಾರಾಟಕ್ಕಾಗಿ ಬರುವ ಸರಕುಗಳ ಮೇಲೆ ತೆರಿಗೆ ವಿಧಿಸುವ (ತಿದ್ದುಪಡಿ) ವಿಧೇಯಕ.

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—೧೯೬೭ನೇ ಇಸವಿಯ ಕರ್ನಾಟಕ ಸ್ಥಳೀಯ ಪ್ರದೇಶಗಳ ಬಳಕೆ ಉಪಯೋಗ ಅಥವಾ ಮಾರಾಟಕ್ಕಾಗಿ ಬರುವ ಸರಕುಗಳ ಮೇಲೆ ತೆರಿಗೆ ವಿಧಿಸುವ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ, ೧೯೬೭ನೇ ಇಸವಿಯ ಕರ್ನಾಟಕ ಸ್ಥಳೀಯ ಪ್ರದೇಶಗಳಿಗೆ ಬಳಕೆ, ಉಪಯೋಗ ಅಥವಾ ಮಾರಾಟಕ್ಕಾಗಿ ಬರುವ ಸರಕುಗಳ ಮೇಲೆ ತೆರಿಗೆ ವಿಧಿಸುವ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ ೨ ರಿಂದ ೫ರವರೆಗೆ

ಅಧ್ಯಕ್ಷರು.—"ಖಂಡ ೨ ರಿಂದ ೫ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ ೨ ರಿಂದ ೫ರವರೆಗೆ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು.)

ಖಂಡ ೧ ಇತ್ಯಾದಿ :

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ "ಮೊದಲನೇ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವನ್ನು ಅಂಗೀಕರಿಸಲಾಯಿತು

(ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—೧೯೬೭ನೇ ಇಸವಿಯ ಕರ್ನಾಟಕ ಸ್ಥಳೀಯ ಪ್ರದೇಶಗಳಿಗೆ ಬಳಕೆ, ಉಪಯೋಗ ಅಥವಾ ಮಾರಾಟಕ್ಕಾಗಿ ಬರುವ ಸರಕುಗಳ ಮೇಲೆ ತೆರಿಗೆ ವಿಧಿಸುವ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.

(ಪ್ರಸ್ತಾವವನ್ನು ಅಂಗೀಕರಿಸಲ್ಪಟ್ಟಿತು, ಮತ್ತು ಮುಸೂದೆಗೆ ಒಪ್ಪಿಗೆ ನೀಡಲಾಯಿತು)

೧೯೮೭ನೇ ಇಸವಿಯ ಕರ್ನಾಟಕ ಭೋಗವಸ್ತುಗಳ (ಹೊಟೇಲುಗಳ ಮಂತ್ತು ವಸತಿಗೃಹಗಳ) ಮೇಲಿನ ತೆರಿಗೆ (ತಿದ್ದುಪಡಿ) ವಿಧೇಯಕ.

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳ ಪರವಾಗಿ ೧೯೮೭ನೇ ಇಸವಿಯ ಕರ್ನಾಟಕ ಭೋಗವಸ್ತುಗಳ (ಹೊಟೇಲುಗಳ ಮತ್ತು ವಸತಿ ಗೃಹಗಳ) ಮೇಲಿನ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಸೂಚಿಸುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತಂ

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಈ ಒಂದು ವಿಧೇಯಕದಲ್ಲಿ ಅವರ ಮೇಲೆ ಈಗ ಇರತಕ್ಕಂಥ ತೆರಿಗೆಯನ್ನು ಕಡಿಮೆ ಮಾಡಿದ್ದೇವೆ. ಸನ್ಮಾನ್ಯ ಮುಖ್ಯಮಂತ್ರಿಗಳು ತಮ್ಮ ಆಯವ್ಯಯ ಪತ್ರದಲ್ಲಿ ಸೂಚಿಸಿದ ಹಾಗೆ ಇದರಲ್ಲಿ ತೆರಿಗೆಯನ್ನು ಕಡಿಮೆ ಮಾಡುವುದಕ್ಕೋಸ್ಕರವಾಗಿ ಈ ಒಂದು ತಿದ್ದುಪಡಿಯನ್ನು ನಿಮ್ಮ ಮುಂದೆ ತಂದಿದ್ದೇವೆ. ಈ ಹೊಟೇಲ್ ಇಂಡಸ್ಟ್ರಿಸ್‌ನವರಿಗೆ ಅನುಕೂಲವಾಗಲಿ ಎನ್ನುವ ದೃಷ್ಟಿಯಿಂದಲೂ ಮತ್ತು ಇನ್ನೊಂದು ಕಾರಣ ಏನೆಂದರೆ ಪರದೇಶದವರು ನಮ್ಮ ರಾಜ್ಯಕ್ಕೆ ಹೆಚ್ಚು ಬರಲಿಕ್ಕೆ ಅನುಕೂಲವಾಗಲಿ ಎನ್ನುವ ದೃಷ್ಟಿಯಿಂದ ಈ ಒಂದು ತಿದ್ದುಪಡಿಯನ್ನು ತಂದಿದ್ದೇವೆ. ಇದಕ್ಕೆ ಈ ಸಭೆ ಅನುಮೋದನೆ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ,

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ, ಇದು ಅನ್ಯಾಯ.

ಶ್ರೀ ಶ್ರೀ ಎ. ಲಕ್ಷ್ಮೀಸಾಗರ್.—ತೆರಿಗೆ ಕಡಿಮೆ ಮಾಡಿದರೆ ಅದು ಹೇಗೆ ಅನ್ಯಾಯವಾಗುತ್ತದೆ?

ಅಧ್ಯಕ್ಷರು.—ಅವರು ಮೊದಲು ಮಾತನಾಡಲಿ.

ಶ್ರೀ ಆರ್ ವೆಂಕಟರಾಮಯ್ಯ —ಮಾನ್ಯ ಅಧ್ಯಕ್ಷರೇ, ಸ್ವಾಮಿ, ಇವರಿಗೆ ತೆರಿಗೆ ಕಡಿಮೆ ಮಾಡಬಾರದಾಗಿತ್ತು. This is total sell out to Hotel Industry. ಈ ಹೊಟೇಲ್ ಉದ್ಯಮಿಗಳು ಇವರ ಹತ್ತಿರ ಬಂದಿರಬಹುದು? ಅದಕ್ಕೆ ಇವರು ಯೀಲ್ಡ್ ಆಗಿದ್ದಾರೆ. ಈ ಕಾಫಿ ಟೀ ಇವುಗಳ ಮೇಲೆ ಇದ್ದ ತೆರಿಗೆಯನ್ನು ಇಳಿಸಂವುದಕ್ಕೆ ಹೋಗಿದ್ದಾರೆ. ನಾನು ಕೇಳುತ್ತೇನೆ. ಈ ಹೊಟೇಲ್ ಇಂಡಸ್ಟ್ರೀಸ್‌ನವರಿಗೆ ಈ ಬಗ್ಗೆ ಇದ್ದಂಥ ತೆರಿಗೆಯನ್ನೆ ಏತಕ್ಕೆ ಕಡಿಮೆ ಮಾಡಬೇಕಾಗಿತ್ತು? ಅವರಿಗೆ ಇನ್ನೂ ಕೂಡ ಜಾಸ್ತಿ ಹಾಕಬೇಕಾಗಿತ್ತು? ಈಗ ಅವರಿಗೆ ತೆರಿಗೆ ಇಳಿಸಿರುವುದು ಬಹಳ ಅನ್ಯಾಯ. ಆದುದರಿಂದ ಈಗ ತಂದಿರತಕ್ಕಂಥಾ ತಿದ್ದುಪಡಿಯನ್ನು ವಾಪಸು ತೆಗೆದುಕೊಳ್ಳಿ. ಮೊದಲು ಹೇಗೆ ಇತ್ತೋ ಹಾಗೆಯೇ ಇರಲಿ. ಶ್ರೀ ಎ. ಲಕ್ಷ್ಮೀಸಾಗರ್‌ರವರ ಮೇಲೆ ನನ್ನ ಒಂದು ಆಪಾದನೆ ಏನು ಎಂದರೆ ಎಲ್ಲಾ ತೆರಿಗೆಗಳನ್ನೂ ಕಡಿಮೆ ಮಾಡಿದರೆ ನಮಗೆ ತೆರಿಗೆ ಕೊಡುವವರು ಯಾರು ಎಂದು ಮೊದಲು ಹೇಳುತ್ತಿದ್ದರು. ನಮಗೆ ತೆರಿಗೆ ಕೊಡಿ ಎಂದು ಹೇಳುತ್ತಿದ್ದರು. ಈಗ ನೋಡಿದರೆ ಎಲ್ಲೋ ಈ ಹೊಟೇಲ್ ಉದ್ಯಮಿದಾರರು ಬಂದು ಇವರಿಗೆ ಪಾರ್ಟಿ ಕೊಟ್ಟಿರಬಹುದು, ಅವರಿಗೆ ಅನುಕೂಲವಾಗಲಿ ಎನ್ನುವ ದೃಷ್ಟಿಯಂನ್ನು ಇದನ್ನು ತಂದಿರಬಹುದು. ಇದು ಬಹಳ ಅನ್ಯಾಯ. ಇದರಿಂದ ನಮ್ಮ ಸರ್ಕಾರಕ್ಕೆ ಬರುವ ದುಡ್ಡು ಹಾಳಾಗುತ್ತದೆ. ಮೊದಲು ಇದ್ದ ಹಾಗೆಯೇ ಇರಲಿ ಎಂದು ಹೇಳುತ್ತೇನೆ.

ಶ್ರೀ ಬಿ ಎಂ. ಇದಿನಬ್ಬ (ಉಳ್ಳಾಲ್).—ಮಾನ್ಯ ಅಧ್ಯಕ್ಷರೇ, ಈ ಹೋಟೆಲ್ ಮೇಲೆ ಇದ್ದಂಥ ತೆರಿಗೆಯನ್ನು ಇಳಿಸಿದ್ದಾರೆ. ಇದು ಬಹಳ ಅನ್ಯಾಯ. ಇವೊತ್ತು ದೇಶದಲ್ಲಿ ನಮ್ಮ ರಾಜ್ಯದಲ್ಲಿ ಈ ಹೊಟೇಲ್ ಉದ್ದಿಮೆದಾರರಿಗೆ ತೆರಿಗೆ ಏನು ಇಳಿಸಿದ್ದಾರೆ ಇದು ಬಹಳ ಅನ್ಯಾಯ. ಹೇಗೆಂದರೆ ನಮ್ಮ ರಾಜ್ಯದಲ್ಲಿ ೧೦೦ಕ್ಕೆ ೯೦ರಷ್ಟು ಇರತಕ್ಕಂಥಾ ಬಡವರಿಗೆ ಮತ್ತು ರೈತರಿಗೆ ಕೊಡಬೇಕಾದಂಥ ಅನೇಕ ಸವಲತ್ತುಗಳನ್ನು ಕೊಡದೆ ಇವರ ಕಡೆಗೆ ಏನು ಗವರ್ನ ಕೊಟ್ಟಿದ್ದಾರೆ ಅದು ಸರಿಯಲ್ಲ. ಬಡವರ ಉದ್ಧಾರಕ್ಕೆ, ರೈತರ ಉದ್ಧಾರಕ್ಕೆ. ನಾವು ಹಾಗೆ ಮಾಡುತ್ತೇವೆ ಹೀಗೆ ಮಾಡುತ್ತೇವೆಂದು ಬರೀ ಕಾಗದದಲ್ಲಿ ಅಚ್ಚು ಹಾಕಿಸುತ್ತಿದ್ದಾರೆಯೇ ವಿನಹ ಅದರಿಂದ ಈಗ ಉಪಯೋಗವಾಗುತ್ತಾ ಇಲ್ಲಾ.

ಬಡವರಿಗೆ ರೈತರಿಗೆ ಸರಿಯಾದ ಒಂದು ವ್ಯವಸ್ಥೆಯನ್ನು ಮಾಡುವುದನ್ನು ಬಿಟ್ಟು ಸರ್ಕಾರದ ಮಂದೆ ನಲಿಯುತ್ತಾ ಇರತಕ್ಕಂಥ ಈ ಹೋಟೆಲ್ ಉದ್ದಿಮೆದಾರರಿಗೆ ಅನುಕೂಲ ಮಾಡಿಕೊಡುವುದು ಸರಿಯಲ್ಲ. ಇವರು ಒಂದೊಂದು ವಾರಕ್ಕೆ ಒಂದೊಂದು ನಮೂನೆಯ ಬೆಲೆಯನ್ನು ಹಾಕುತ್ತಾರೆ, ಇವರು ಊಟದ ದರವನ್ನು ಒಂದು ವಾರ ೪ ರೂಪಾಯಿ ಹಾಕಿದರೆ ಮತ್ತೊಂದು ವಾರ ೩ ರೂಪಾಯಿ ಹಾಕುತ್ತಾರೆ. ಮತ್ತೊಂದು ವಾರ ೨ ರೂಪಾಯಿ ಹಾಕುತ್ತಾರೆ. ಇವರ ಮನಸ್ಸಿಗೆ ಬಂದ ಹಾಗೆ ದರ ಹಾಕುತ್ತಾರೆ, ಅವರನ್ನ ಕೇಳುವವರು ಯಾರೂ ಇಲ್ಲ. ಹೇಳುವವರೂ ಯಾರೂ ಇಲ್ಲ. ಸರಿಯಾದ ಒಂದು ನಿಗದಿಯಾದ ಬೆಲೆ ಇಲ್ಲ. ಇದು ಮೊದಲು ತಪ್ಪಬೇಕು. ಈಗ ಇದಕ್ಕೆ ಬೇರೆ ದಾರಿಯೇ ಇಲ್ಲದಂತಾಗಿದೆ,

ಇದರಿಂದಾಗಿ ಗ್ರಾಹಕರು ಮೂಕಪಶುಗಳಾಗಿದ್ದಾರೆ. ಈಗ ನಮ್ಮ ರಾಜ್ಯದಲ್ಲಿ ಶೇಕಡ ೮೦ರಷ್ಟು ಜನ ಏನು ಬಡವರು ಇದ್ದಾರೆ, ಅವರೆಲ್ಲರೂ ಚಿಲ್ಲರೆ ಜನ ಎಂದು ತಾವು ತಿಳಿಯಬಾರದು. ಒಂದು ದಿನ ಈ ಜನರು ಏನಾದರೂ ಕ್ರಾಂತಿ ಎದ್ದರೆ ಅಲ್ಲೋಲಕಲ್ಲೋಲವಾಗುತ್ತದೆ. ಈ ಹೋಟೆಲ್‌ನವರು ಮೊದಲು ಒಂದು ಬಿಲ್ಡಿಂಗ್ ಕಟ್ಟಿಸಿದ್ದರೆ ಇವೊತ್ತು ಹತ್ತು ಬಿಲ್ಡಿಂಗ್‌ಗಳನ್ನು ಕಟ್ಟಿಸಿದ್ದಾರೆ ಈ ಮೊದಲು ನಾಲ್ಕು ಕಾರುಗಳನ್ನು ಇಟ್ಟುಕೊಂಡಿದ್ದವರು ಇವೊತ್ತು ಹತ್ತು ಕಾರುಗಳನ್ನು ಇಟ್ಟು ಕೊಂಡಿದ್ದಾರೆ. ಅಂದರೆ ಇವರು ಆಸ್ತಿ ಮಾಡಬಾರದೆಂದು ನಾನು ಹೇಳುವುದಿಲ್ಲ. ಆದರೆ ನೀವು ಒಂದು ಕಡೆ ಸಮಾಜವಾದ ಜಾರಿಯಲ್ಲಿ ಬರಬೇಕೆಂದು ಹೇಳುತ್ತಿರುವಾಗ ಮತ್ತೊಂದು ಕಡೆ ಈ ಹೋಟೆಲ್‌ನವರು ಹೆಚ್ಚಿನ ಶ್ರೀಮಂತರಾಗುವುದಕ್ಕೆ ಏತಕ್ಕೆ ಅವಕಾಶ ಮಾಡಿಕೊಡುತ್ತಿದ್ದೀರಿ ? ನೀವು ಬಡವರಿಗೆ ಮತ್ತು ಕೂಲಿಗಾರರಿಗೆ ಏನು ಅನುಕೂಲ ಮಾಡಿಕೊಟ್ಟಿದ್ದೀರಿ? ನಮ್ಮ ಭಾಗದಲ್ಲಿ ಕೂಲಿಗಾರರು ವೇತನ ಇಲ್ಲದೆ ಮುಷ್ಕರ ಮಾಡುತ್ತಿದ್ದಾರೆ. ನಮ್ಮ ಭಾಗದ ಹೆಂಚಿನ ಕಾರ್ಖಾನೆ ಕಾರ್ಮಿಕರು ಮುಷ್ಕರ ಮಾಡುತ್ತಿದ್ದಾರೆ. ಅವರು ಸಂಬಳ ಇಲ್ಲದೆ ಒದ್ದಾಡುತ್ತಿದ್ದಾರೆ ಅಂತಹವರ ಕಡೆಗೆ ನೀವು ಗಮನ ಕೊಡದೆ ಪಸತಿಗೃಹಗಳ ಮೇಲೆ ಹಾಕುತ್ತಿದ್ದ ತೆರಿಗೆಯನ್ನು ಕಡಿಮೆ ಮಾಡಿದ್ದೀರಿ. ಈ ವಿಚಾರದಲ್ಲಿ ನೀವು ಹೋಟೆಲ್‌ನವರಿಗೆ ತಲೆಬಾಗಿದ್ದುದು ಸರಿಯಲ್ಲ. ಇದು ಮೊದಲು ಇದ್ದಂತೆ ಇರಬೇಕು ಇಲ್ಲವೇ ಈಗ ಇರುವುದನ್ನು ಹೆಚ್ಚು ಮಾಡಿದರೂ ಸಹ ನಾವು ಒಪ್ಪುತ್ತೇವೆ. ಈ ಬಗ್ಗೆ ನೀವು ಒಂದು ಸರಿಯಾದಂಥ ಸರ್ವೆ ನಡೆಸಬೇಕು. ನನಗೆ ತಿಳಿದಂತೆ ಈ ಹೋಟೆಲ್‌ನವರು ಬಹಳ ಶ್ರೀಮಂತರಾಗಿದ್ದಾರೆ. ಬಹಳ ದೊಡ್ಡವರಾಗಿದ್ದಾರೆ ಇವರು ಶ್ರೀಮಂತರಾಗಬಾರದೆಂದು ನಾನು ಹೇಳುವುದಿಲ್ಲ. ಆದರೆ ನಮ್ಮಲ್ಲಿ ಶೇಕಡ ೮೦ರಷ್ಟು ಬಡವರು ಮತ್ತು ಕೂಲಿಗಾರರು ಏನಿದ್ದಾರೆ, ಅವರ ಹಿತರಕ್ಷಣೆ ಬಗ್ಗೆ ನಿಮ್ಮಲ್ಲಿ ಯಾವ ಕಳಕಳಿಯೂ ಇಲ್ಲವಾಗಿದೆ. ಬಡವರ ಬಗ್ಗೆ ನಿಮಗೆ ಸಾಕಷ್ಟು ಕಾಳಜಿ ಇದೆ ಎಂದು ನೀವು ಬಾಯಲ್ಲಿ ಹೇಳಿದರೆ ಸಾಲದು, ಅದು ಕಾರ್ಯರೂಪದಲ್ಲಿ ಬರಬೇಕು. ನೀವು ಬಡವರಿಗೆ ಸಹಾಯ ಮಾಡುವುದಕ್ಕೆ ಬದಲು ಶ್ರೀಮಂತರಿಗೆ ಸಹಾಯ ಮಾಡಲು ಹೊರಟ್ಟಿದ್ದೀರಿ. ಇದು ನಿಮ್ಮ ಸಿದ್ಧಾಂತಕ್ಕೆ ಅಪವಾದವಾಗಿದೆ. ಹೋಟೆಲ್‌ನವರಿಗೆ ತಲೆಬಾಗುವ ನಿಮ್ಮ ನೀತಿ ಏನದೆ, ಇದು ಸರಿಯಲ್ಲ. ಈ ತೆರಿಗೆ ಮೊದಲು ಇದ್ದಂತೆ ಇರಬೇಕು. ಆದ್ದರಿಂದ ಇದನ್ನು ವಾಪಸ್ ತೆಗೆದು ಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್,—ಮಾನ್ಯ ಅಧ್ಯಕ್ಷರೇ, ಮಾನ್ಯ ವೆಂಕಟರಾಮಯ್ಯನವರು ಇನ್ನೂ ಕಾಲ್ಪನಿಕ ಲೋಕದಲ್ಲಿಯೇ ಇದ್ದಾರೆ. ಅವರು ಇಲ್ಲಿ ಮಾತನಾಡುವಾಗ sell out ಎಂಬ ಪದವನ್ನು ಏನು ಉಪಯೋಗ ಮಾಡಿದರು, ಆ ಭಾಷೆಯನ್ನು ಉಪಯೋಗಿಸುವ ಸಂದರ್ಭದಲ್ಲಿ ಅವರ ಹತ್ತಿರ ಏನಾದರೂ ಪುರಾವೆಗಳು ಇರಬೇಕಾಗಿತ್ತು. ಅವರ ಹತ್ತಿರ ಯಾವುದೇ ಪುರಾವೆ ಇಲ್ಲದೆ ಈ ಪದವನ್ನು ಉಪಯೋಗಿಸಿದ್ದುದು ಸರಿಯಲ್ಲ, ಈ ತೆರಿಗೆ ಕಡಿಮೆ ಮಾಡಿದ್ದು ಸರಿಯಲ್ಲ, ಹೆಚ್ಚು ಮಾಡಬೇಕಾಗಿತ್ತು ಎಂದು ಹೇಳಬೇಕಾದರೆ ಹೇಳಲಿ. ಆದರೆ ಅವರು ದಯಮಾಡಿ ಇನ್ನು ಮುಂದೆ ಈ ರೀತಿ ಮಾತನಾಡ ಬಾರದೆಂದು ಹೇಳುತ್ತೇನೆ. ಅವರು ಆ ರೀತಿ ಮಾತನಾಡಿದ್ದು ಸರಿಯಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅವರು ಆ ರೀತಿ ಹೇಳಿದ್ದುದು ಸರಿಯಲ್ಲ ಎಂದರೆ ಈ ತೆರಿಗೆಯನ್ನು ತೆಗೆಯುತ್ತೀರಾ ?

ಶ್ರೀ ಎ. ಲಕ್ಷ್ಮೀಸಾಗರ್.—'sell out'–it is a very strong language. I cannot but repudiate it strongly with all night at my command.

ಸನ್ಮಾನ್ಯ ಅಧ್ಯಕ್ಷರೇ, ಕೇಂದ್ರ ಸರ್ಕಾರದ ಪ್ರವಾಸೋದ್ಯಮ ರಾಜ್ಯಮಂತ್ರಿಗಳು ನಮ್ಮ ರಾಜ್ಯ ಸರ್ಕಾರಕ್ಕೆ ಪತ್ರ ಬರೆದು ಕರ್ನಾಟಕ ರಾಜ್ಯದಲ್ಲಿ ಪ್ರವಾಸೋದ್ಯಮವನ್ನು ಹೆಚ್ಚಿಸುವುದಕ್ಕೋಸ್ಕರವಾಗಿ ಮತ್ತು ಬೇರೆ ದೇಶಗಳ ಪ್ರವಾಸಿಗರನ್ನು ಆಕರ್ಷಣೆ ಮಾಡುವುದಕ್ಕಾಗಿ ಈಗಿರುವಂತಹ ತೆರಿಗೆಯನ್ನು ಕಡಿಮೆ ಮಾಡಿ ಎಂದು ತಿಳಿಸಿದ್ದಾರೆ. ಇದನ್ನು ನಾವು ಗಮನದಲ್ಲಿಟ್ಟುಕೊಂಡು ಇಲ್ಲಿ ಕಡಿಮೆ ಮಾಡಿದ್ದೇವೆ. ಇದು ಪಕ್ಕಾನಿಷ್ಪನ್ನವಾಗಿದೆ. ಮತ್ತೆ ಮಾನ್ಯ ಇದಿನಬ್ಬ ಅವರು ಇಲ್ಲಿ ಅನೇಕ ಕಡಲ ತೀರಗಳಲ್ಲಿ ಪ್ರವಾಸಿಗರ ಅನುಕೂಲಕ್ಕಾಗಿ ವಸತಿಗೃಹಗಳನ್ನು ಕಟ್ಟಿಸಿಕೊಡಿ ಎಂದು ಕೇಳಿದ್ದಾರೆ. ಅವರು ಸ್ವತಃ ಕವಿಗಳಿದ್ದಾರೆ, ಕಡಲ ತೀರದಲ್ಲಿ ಹೋಗಿ ಕುಳಿತರೆ ಕವಿತೆ ಬರೆಯಲು ಉತ್ಸಾಹ ಬರುತ್ತದೆಂದು ಅವರೇ ಹೇಳುತ್ತಾರೆ. ನಾವು ಏನೇ ಅಭಿವೃದ್ಧಿ ಕೆಲಸಗಳನ್ನು ಮಾಡಬೇಕಾದರೂ ಹಣ ಬೇಕಾಗುತ್ತದೆ. ಪ್ರವಾಸಿಗಳಿಗೆ ಕೆಲವೊಂದು ಅನುಕೂಲಗಳನ್ನು ಕಲ್ಪಿಸಿಕೊಡಬೇಕಾದರೆ ನಮಗೆ ಹಣ ಬೇಕಾಗುತ್ತದೆ. ನಾವು ಪ್ರವಾಸೋದ್ಯಮವನ್ನು ಬೆಳೆಸಬೇಕಾದರೆ ನಾವು ಕೆಲವು ಸಂದರ್ಭಗಳಲ್ಲಿ ತೆರಿಗೆಯನ್ನು ಹೆಚ್ಚು ಮಾಡಬೇಕಾಗುತ್ತದೆ. ಮತ್ತೆ ಕೆಲವು ಸಂದರ್ಭಗಳಲ್ಲಿ ಕಡಿಮೆ ಮಾಡಬೇಕಾಗುತ್ತದೆ. ಈಗ ನಾವು ಕಡಿಮೆ ಮಾಡಿದ್ದೇವೆ ಇದರಿಂದ ನಮಗೆ ಯಾವ ರೀತಿಯಿಂದಲೂ ಅನುಕೂಲವಾಗದಿದ್ದರೆ ಮುಂದಿನ ವರ್ಷ ಮತ್ತೆ ಹೆಚ್ಚು ಮಾಡೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖೂರ್ಗೆ.—ಹಾಗಿದ್ದರೆ ಆಗಬಹುದು.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ : ''ಗೌರವನೀಯ ಇಸವಿಯ ಕರ್ನಾಟಕ ಭೋಗವಸ್ತುಗಳ (ಹೋಟೆಲುಗಳ ಮತ್ತು ವಸತಿ ಗೃಹಗಳ) ಮೇಲಿನ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು.''

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು)

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ ೨ ರಿಂದ ೩ರವರೆಗೆ.—

ಅಧ್ಯಕ್ಷರು.—''ಖಂಡ ೨ ರಿಂದ ೩ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ,''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ ೨ ರಿಂದ ೩ರವರೆಗೆ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ ೧ ಇತ್ಯಾದಿ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ: ''ಮೊದಲನೆಯ ಖಂಡ ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಂಗೊಳಿಸುವ ಸೂತ್ರ ಸಂಹಿತೆ ಈ ವಿಧೇಯಕದ ಭಾಗವಾಗಿರುತ್ತದೆ.''

ಪ್ರಸ್ತಾವವನ್ನು ಅಂಗೀಕರಿಸಲಾಯಿತು

(ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಂಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು).

ಪ್ರಸ್ತಾವದ ಅಂಗೀಕಾರ

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಗೌರವನೀಯ ಇಸವಿಯ ಕರ್ನಾಟಕ ಭೋಗವಸ್ತುಗಳ (ಹೋಟೆಲುಗಳ ಮತ್ತು ವಸತಿ ಗೃಹಗಳ) ಮೇಲಿನ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ : ''ಗೌರವನೀಯ ಇಸವಿಯ ಕರ್ನಾಟಕ ಭೋಗವಸ್ತುಗಳ (ಹೋಟೆಲಿಂಗಳಿಯ ಮತ್ತು ವಸತಿ ಗೃಹಗಳ) ಮೇಲಿನ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು''.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವಂಸೂದೆಗೆ ಒಪ್ಪಿ ಗೆ ನೀಡಲಾಯಿತು.